**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>**

**<u>ಕೆ.ಆರ್.ನಗರ</u>**

**<u>ಪಿ.ಸಿ. ಆರ್ 123/2025</u>**

**<u>ಸಿಡಬ್ಲೂ-1</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಲೀಲಾವತಿ |
| ತಂದೆಯ ಹೆಸರು | - | ಲೇಟ್ ನಂಜಪ್ಪ |
| ವಯಸ್ಸು | - | 68 ವರ್ಷ |
| ಕೆಲಸ | - | ನಿವೃತ್ತ ಪ್ರೌಢಶಾಲಾ ಶಿಕ್ಷಕಿ |
| ವಾಸ | - | ಕಾಳೇನಹಳ್ಳಿ ಬಡಾವಣೆ |

**<u>ದಿನಾಂಕ 31-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಎಪಿಪಿಯವರಿಂದ</u>**

ನಾನು ನಿವೃತ್ತಿಯಾದಾಗ ನನ್ನ ನಿವೃತ್ತ ವೇತನ ಬಂದಿದ್ದು, ಸದರಿ ಹಣದಿಂದ ನಿವೇಶನನ್ನು ಖರೀದಿಸಿ ಮನೆಯನ್ನು ನಿರ್ಮಾಣ ಮಾಡಿದ್ದೇನೆ. 5-6 ವರ್ಷಗಳ ಹಿಂದೆ ಕೆ.ಆರ್.ನಗರಕ್ಕೆ ಬಂದಿರುತ್ತೇನೆ. ನನ್ನಹಿರಿಯ ಮಗ ಯಶವಂತ ಹಾಗೂ ಆತನ ಪತ್ನಿ ಚಂದನಾ ಇಬ್ಬರು ಊಟಗಳ್ಳಿಯ ಸರ್ಕಾರಿ ಪೋಲೀಸ್ ಕ್ವಾಟ್‌ರ್ಸ್ ನಲ್ಲಿ ವಾಸವಾಗಿದ್ದರು. ಅವರಿಬ್ಬರು ಪರಸ್ಪರ ಮನಸ್ತಾಪದಿಂದ ನ್ಯಾಯಾಲಯಕ್ಕೆ ಹೋಗಿರುತ್ತಾರೆ.

2. ನಾನು ಒಬ್ಬಳೇ ಕೆ.ಆರ್.ನಗರದಲ್ಲಿ ವಾಸವಾಗಿದ್ದೇನೆ. ಚಂದನಾ ಮತ್ತು ಅವರ ಚಿಕ್ಕಪ್ಪ ನಾನು ಸ್ವಂತ ದುಡಿಕೆ ಹಣದಿಂದ ನಿರ್ಮಾಣ ಮಾಡಿರುವ ಮನೆಯಲ್ಲಿ ಪಾಲನ್ನು ಕೇಳುತ್ತಿದ್ದಾರೆ. ನಾನು ನನ್ನ ನಿವೃತ್ತಿ ವೇತನದಿಂದ ಜೀವನವನ್ನು ಸಾಗಿಸುತ್ತಿದ್ದೇನೆ. 5 ವರ್ಷದ ಹಿಂದೆ ನಾನು ಊಟಗಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ಒಬ್ಬಳೇ ವಾಸವಾಗಿದ್ದೇನು. ಅಲ್ಲಿಗೂ ಸಹ ಚಂದನಾ, ಚಿಕ್ಕಪ್ಪ ಪಾಲಾಕ್ಷ, ಪಾಲಾಕ್ಷ ರವರ ಹೆಂಡತಿ ಪಂಕಜ, ಚಂದಾನರವರ ತಾಯಿ ಭಾಗ್ಯಮ್ಮ ಅಲ್ಲಿಗೂ ಬಂದು ನನ್ನನ್ನು ಕುರಿತು ಅವ್ಯಾಚ್ಯ ಪದಗಳಿಂದ ನಿಂದಿಸಿರುತ್ತಾರೆ.

**3**. ಸಾರ್ವಜನಿಕ ಸ್ಥಳದಲ್ಲಿ ಪಾಲಾಕ್ಷ ನನಗೆ ಅವಮಾನವಾಗುವ ರೀತಿಯಲ್ಲಿ ಅವ್ಯಾಚ್ಯ ಶಬ್ದಗಳಿಂದ ನಿಂದಿಸಿ ಕೊಲೆ ಮಾಡುವುದಾಗಿ ಬೆದರಿಕೆಯನ್ನು ಹಾಕಿರುತ್ತಾರೆ. ಈ ಸಂಬಂಧ ನಾನು ದೂರನ್ನು ದಾಖಲು ಮಾಡಿದ್ದು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ನಾನು ಎಲ್ಲಿ ಬಾಡಿಗೆ ಇದ್ದರೂ ಸಹ ಅಲ್ಲಿಗೆ ಬಂದು ಅವ್ಯಾಚ್ಯ ಪದಗಳಿಂದ ನಿಂದಿಸುತ್ತಾರೆ.

**4**. ದಿಃ 15-04-2025 ರಂದು ನಮ್ಮ ಮನೆಯ ಮುಂದೆ ಬಂದು ಸಾರ್ವಜನಿಕ ರಸ್ತೆಯಲ್ಲಿ ಸಾರ್ವಜನಿಕರ ಮತ್ತು ಅಕ್ಕಪಕ್ಕದವರ ಸಮಕ್ಷಮ ಅವ್ಯಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ. ನನಗೆ ಎಲ್ಲಿ ಹೋದರೂ ಸಹ ಮಾರ್ಯಾದೆಯನ್ನು ಹಾಳು ಮಾಡುತ್ತೇವೆ ಮತ್ತು ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆಯನ್ನು ಹಾಕಿರುತ್ತಾರೆ. ಸದರಿ ದಿನ ನನ್ನ ಚಿಕ್ಕ ಮಗ ಪ್ರವೀಣ ಹಾಗೂ ನಮ್ಮ ಬೀಗರಾದ ಶಿವಣ್ಣ ರವರು ಸಹ ಇದ್ದು ಜಗಳವನ್ನು ಬಿಡಿಸಿರುತ್ತಾರೆ.

**5**. ಈ ಸಂಬಂಧ ನಾನು ಕೆ.ಆರ್. ನಗರ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದು ಪಾಲಾಕ್ಷರವರು ತಮ್ಮ ಪ್ರಭಾವವನ್ನು ಬೀರಿ ಯಾವುದೇ ಕ್ರಮವನ್ನು ಕೈಗೊಳ್ಳದಂತೆ ಮಾಡಿರುತ್ತಾರೆ. ನಂತರ ಚಂದನಾರವರ ತಾಯಿ ನನ್ನ ಬಳಿ ಜಮೀನನ್ನು ಖರೀದಿ ಮಾಡುವ ಸಲುವಾಗಿ 4 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದು ಅದನ್ನು ಹಿಂದಿರುಗಿಸುವಂತೆ ಕೇಳಿದರೆ ಗಲಾಟೆಯನ್ನು ಮಾಡುತ್ತಾರೆ. ಅವರ ಉದ್ದೇಶ ನನ್ನನ್ನು ಕೆ.ಆರ್.ನಗರದಿಂದ ಕಳುಹಿಸುವುದಾಗಿರುತ್ತದೆ.

**6**. ಇದಾದ ನಂತರ, ಪೊಲೀಸ್ ವರಿಷ್ಠಾಧಿಕಾರಿಗೆ ದೂರನ್ನು ಕೊಟ್ಟಿದ್ದರು ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ. ಆದ್ದರಿಂದ ನನಗೆ ಸೂಕ್ತ ಕಾನೂನು ಕ್ರಮವನ್ನು ಜರುಗಿಸುಂತೆ ಕೇಳುತ್ತಿದ್ದೇನೆ.

ನನ್ನ ದೂರಿಗೆ ಸಂಬಂಧಪಟ್ಟಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

| **ದಾಖಲಾತಿಗಳು** | **ನಿಶಾನೆ** |
|---|---|
| ದಿಃ 15-04-2025 ರ ಒಂದು ಸ್ವೀಕೃತಿಯನ್ನು ಹಾಜರು ಪಡಿಸಿದ್ದು ಅದನ್ನು | ನಿಪಿ-1 |
| ದಿಃ 19-04-2025 ರ ಹಿಂಬರಹವನ್ನು ಹಾಜರು ಪಡಿಸಿದ್ದು ಅದನ್ನು | ನಿಪಿ-2 |
| ದಿಃ 06-08-2025 ರ ದೂರನ್ನು ಹಾಜರು ಪಡಿಸಿದ್ದು ಅದನ್ನು | ನಿಪಿ-3 |
| 6 ಅಂಚೆ ರಸೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ | ನಿಪಿ-4 |
| 4 ಅಂಚೆ ಸ್ವೀಕೃತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ | ನಿಪಿ-5 ರಿಂದ 8 |

ಮೇಲ್ಕಂಡ ದಾಖಲಾತಿಗಳನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅವುಗಳನ್ನು ನಿಶಾನಿಕರೆಸಲಾಗಿದೆ.

ಈ ಹಂತದಲ್ಲಿ ದೂರುದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೇಗೆ ಕಾಲಾವಕಾಶವನ್ನು ಕೋರಿದ್ದರಿಂದ ಕಾಲಾವಕಾಶವನ್ನು ನೀಡಲಾಯಿತು

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

**(ಚಂದನ್ ಎಸ್ )**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ